O.S. 244/2016

P.W.1

**ಸಾಕ್ಷಿಯನ್ನು ದಿನಾಂಕಃ 13-02-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ 3 ನೇ ಪ್ರತಿವಾದಿಯ ಪರ ಶ್ರೀ. ಬಿ.ಹೆಚ್ ವಕೀಲರವರಿಂದಃ**

ನೌಕರಿ ದೊರೆದ 3 ವರ್ಷಗಳ ನಂತರ ನನ್ನ ಮದುವೆಯಾಗಿರುತ್ತದೆ. ಪ್ರಥಮವಾಗಿ ನಾನು ಶಿಕ್ಷಕ ವೃತ್ತಿಗೆ ಕೂಡ್ಲಿಗಿ ತಾಲೂಕಿನ ಪಾಲಯ್ಯನ ಕೋಟೆಗೆ ನಿಯಕ್ತಿಗೊಂಡೆನು. ಈಗ ನಾನು ಮಾಚಿಕೆರೆಯಲ್ಲಿ ಕೆಲಸ ಮಾಡುತ್ತಿರುವೆನು. ಪಾಲಯ್ಯನ ಕೋಟೆಯಿಂದ ತುಪ್ಪಕನಹಳ್ಳಿಗೆ ವರ್ಗಾವಣೆಯಾಗಿ ತದನಂತರ ಮಾಚಿಕೆರೆಗೆ ವರ್ಗಾವಣೆಯಾಯಿತು. ಮಾಚಿಕೆರೆಗೂ ನನ್ನ ತವರುಮಮನೆಯಾದ ಜಗಳೂರು ತಾಲೂಕಿನ ಸೊಕ್ಕೆ ಗ್ರಾಮಕ್ಕೆ 9 ಕಿ ಮೀ ಆಗುವುದು. ನನ್ನ ತವರು ಮನೆಯಲ್ಲಿ ನಾನು ಮಾತ್ರ ನೌಕರಿಯಲ್ಲಿದ್ದೇನೆ ಎಂದರೆ ಸರಿಯಲ್ಲ. ನನಗೆ ನೌಕರಿಸಿಕ್ಕಿದ 6 ವರ್ಷದ ನಂತರ ನನ್ನ ತಮ್ಮನಿಗೆ ನೌಕರಿಸಿಕ್ಕಿರುತ್ತದೆ. ನನ್ನ ತವರುಮನೆಯವರು ಊಟ ಬಟ್ಟೆಯನ್ನು ನಿಭಾಯಿಸಿಕೊಳ್ಳಲು ಮಾತ್ರ ಆರ್ಥಿಕವಾಗಿ ಶಕ್ತರಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಮ್ಮನ ವಿಧ್ಯಾಭ್ಯಾಸವನ್ನು ನಾನು ನೌಕರಿ ದೊರೆತ ನಂತರ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮದುವೆಯಾದಾಗ ನನ್ನ ಗಂಡನಾದ ಹಾವಿನ ಸುಭಾಷ್ಚಂದ್ರ ಇವರು ನಿರುದ್ಯೋಗಿ ಎಂದರೆ ಸರಿಯಲ್ಲ. ಅವರು ಹೊಲದಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಬಸ್ ಮಾಲಿಕತ್ವವನ್ನು ಹೊಂದಿದ್ದರು. ನಾನು ವಿವಾಹವಾದ 2-3 ವರ್ಷಗಳ ನಂತರ ನನ್ನ ಗಂಡ 1 ಬಸ್ ಖರೀದಿ ಮಾಡಿದನು. ಬಸ್ ಖರೀದಿಸಲು ನಾನು ನನ್ನ ಗಂಡನಿಗೆ ಆರ್ಥಿಕ  ಸಹಾಯ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಮ್ಮನ ವಿದ್ಯಾಭ್ಯಾಸಕ್ಕೆ ಮತ್ತು ಗಂಡನ ಬಸ್ ಗೆ ಹಣ ಹೊಂದಿಸಲು ನಾನು ಅನೇಕರ ಬಳಿ ಸಾಲ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಒಂದು ಸಿವಿಲ್ ದಾವೆ ಇದ್ದು, ಅದು ಈಗ ಮುಕ್ತಾಯವಾಗಿದೆ. ಸದರಿ ಸಿವಿಲ್ ದಾವೆ ರೂ.50,000/- ಹಾಕಲಾಗಿತ್ತು. ಸದರಿ ದಾವೆಯಲ್ಲಿ ಡಿಕ್ರಿಯಾದ ನಂತರ ನಾನು ಮತ್ತು ನನ್ನ ಗಂಡ ಸದರಿ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಮಲ್ಜಾರಿ ಪ್ರಕರಣ ನಂ.32/2009 ನ್ನು ವಸೂಲಾತಿಗಾಗಿ ನನ್ನ ವಿರುದ್ಧ ಬಂಗಿ ಕ್ಯಾತಮ್ಮನವರ ಚಂದ್ರಮ್ಮನವರು ಹಾಕಿದ್ದರು ಎಂದರೆ ಸರಿ. ಸದರಿ ಅಮಲ್ಜಾರಿ ಪ್ರಕರಣವನ್ನು ರಾಜಿ ಮಾಡಿಸುವಂತೆ ಡಿಕ್ರಿದಾರರ ವಕೀಲರನ್ನು ಕೇಳಿಕೊಂಡಿದ್ದೆವು ಎಂದರೆ ಸರಿಯಲ್ಲ. ಸದರಿ ಅಮಲ್ಜಾರಿ ಪ್ರಕರಣ ಎಷ್ಟು ಮೊತ್ತಕ್ಕೆ ರಾಜಿಯಾತು ಎಂದು ನನಗೆ ಗೊತ್ತಿರುವುದಿಲ್ಲ. ನಾವು ಅದನ್ನು ರೂ.80,000/- ಬಗೆಹರಿಸಿಕೊಂಡಿದ್ದೆವೆ ಎಂದರೆ ಸರಿಯಲ್ಲ. ಆ ಹಣವನ್ನು ತೀರಿಸಲು ನಾನು ಹಾಗೂ ನನ್ನ ಗಂಡ ಸಾಲ ಮಾಡಿದ್ದೆವೆ ಎಂದರೆ ಸರಿಯಲ್ಲ. ನನ್ನ ಗಂಡ ಮಣಿಪಾಲ ಆಸ್ಪತ್ರೆಯಿಂದ ಬರುವಾಗ ದಾರಿಯ ಮಧ್ಯದಲ್ಲಿ ಮೃತಪಟ್ಟಿರುತ್ತಾರೆ. ಮಣಿಪಾಲ ಆಸ್ಪತ್ರೆಯಲ್ಲಿ 4 ದಿನ ಇದ್ದೆವು. ನನ್ನ ಗಂಡ ಅನೇಕ

O.S. 244/2016

P.W.1

ವರ್ಷಗಳದಿಂದ ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಲಿವಲ್ ಡ್ಯಾಮೇಜ್ ಆದ ಕಾರಣ ನನ್ನ ಗಂಡ ಮೃತಪಟ್ಟರು ಎಂದರೆ ಸರಿಯಲ್ಲ. ನನ್ನ ಗಂಡ ಅನೇಕ ಸಾರಿ ಮಣಿಪಾಲ ಆಸ್ಪತ್ರೆಗಾಗಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಅದಕ್ಕೂ ಪೂರ್ವದಲ್ಲಿ ದಾವಣೆಗೆರೆಯಲ್ಲಿ ಚಿಕಿತ್ಸೆ ಪಡೆಯುತ್ತಿದರು ಎಂದರೆ ಮಾಮೂಲಾಗಿ ಪಡೆಯುತ್ತಿದ್ದರು, ನನ್ನ ಯಜಮಾನರ ಮಾಲಿಕತ್ವದ ಬಸ್ ಹಿಕ್ಕಂಗೇರಿ ಕೆರೆಯ ಹತ್ತಿರ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ಆ ಬಸ್ಸಿಗೆ ಇನ್ಸುರನ್ಸ್ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಯಾರು ಮೃತ ಪಡಲಿಲ್ಲ. ಅಪಘಾತದಲ್ಲಿ ಗಾಯಳುಗಳಿಗೆ ನಾನು ಮತ್ತು ನನ್ನ ಯಜಮಾನರು ಕೈಯಿಂದ ಪರಿಹಾರ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಏನು ತಕರಾರು ಸಲ್ಲಿಸಿರುವರು ಎಂದು ನಾನು ತಿಳಿದುಕೊಂಡಿರುವುದಿಲ್ಲ.

1 ನೇ ದಾವಾ ಆಸ್ತಿಯನ್ನು ನನ್ನ ಗಂಡ 3 ನೇ ಪ್ರತಿವಾದಿಗೆ ಮಾರಾಟ ಮಾಡುವ ಮೊದಲು ಸದರಿ ಆಸ್ತಿಗೆ ಸಂಬಂದಿಸಿದಂತೆ ನಡೆದ ವ್ಯವಹಾರಗಳು ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿ ತಕರಾರು ಸಲ್ಲಿಸಿದ ನಂತರ ಸದರಿ 1 ನೇ ದಾವಾ ಆಸ್ತಿಗೆ ಸಂಬಂದ ನಡೆದ ವ್ಯವಹಾರಣೆಗಳನ್ನು ತಿಳಿದುಕೊಳ್ಳುವ ಸಲುವಾಗಿ ನಾನು ದಾಖಲೆಗಳನ್ನು ಪಡೆದು ಪರಿಶೀಲನೆ ಮಾಡಿರುವುದಿಲ್ಲ. ಸೋಕ್ಕೆ ಗ್ರಾಮದಿಂದ ತೂರಹಳ್ಳಿ ಗ್ರಾಮ 3 ಕಿ.ಮೀ. ದೂರ ಇರುತ್ತದೆ ಎಂದರೆ ಸರಿ. ತೂರಹಳ್ಳಿ ಗ್ರಾಮದ ಕರಿಬಸಮ್ಮ ಚೆಳ್ಳಿ ಗಂಡ ಶಿವಕುಮಾರ ಈಕೆ ನನ್ನ ಪರಿಚಯಿಸ್ಥರು ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ದಾಖಲೆ ಇಲ್ಲದ ಕಾರಣ ನನ್ನ ಯಜಮಾನರ ಹೆಸರಿನಲ್ಲಿ ಭದ್ರತೆಗಾಗಿ ಸದರಿ ಕರಿಬಸಮ್ಮ ಚೆಳ್ಳಿ ಈಕೆಯ ಹೆಸರಿಗೆ 1 ನೇ ದಾವಾ ಆಸ್ತಿಗೆ ಸಂಬಂದಿಸಿದಂತೆ ನೊಂದಾಯಿತ ಕ್ರಯಕರಾರು ಪತ್ರವನ್ನು ನನ್ನ ಗಂಡ ಬರೆದುಕೊಟ್ಟನು ಎಂದರೆ ಸರಿಯಲ್ಲ. ಸದರಿ ಕ್ರಯಕರಾರು ಪತ್ರವನ್ನು ನನ್ನ ಯಜಮಾನರು ರೂ.1,10,000/-ಭದ್ರತೆಗಾಗಿ ಬರೆದುಕೊಟ್ಟಿರುವರು ಎಂದರೆ ಸರಿಯಲ್ಲ. ಸಾಕ್ಷಿಗೆ ವಕೀಲರು ನೊಂದಾಯಿತು ಕ್ರಯಕರಾರುಪತ್ರದ ದಾಖಲೆಯನ್ನು ತೋರಿಸಿ ಅದರಲ್ಲಿ ಇರುವ ವ್ಯಕ್ತಿಯಾರು ಎಂದು ಕೇಳಿದಾಗ ಸಾಕ್ಷಿಯು ಅವರು ನನ್ನ ಗಂಡನಾಗಿರುವರು ಎಂದು ನುಡಿದರು. ನ್ಯಾಯಾಲಯದ ರೆಫರೆನ್ಸ್ ಉದ್ದೇಶಕ್ಕಾಗಿ ಸದರಿ ದಾಖಲೆಯನ್ನು ನಿಸಿ-1 ಎಂದು ಗುರುತಿಸಲಾಯಿತು. ಸಾಲದ ಹಣವನ್ನು ಬಡ್ಡಿ ಸಮೇತ ಪಾವತಿಸುವಂತೆ ಕರಿಬಸಮ್ಮ ಚೆಳ್ಳಿ ಒತ್ತಾಯ ಮಾಡಿದ ಕಾರಣ ನಾವು ನೊಂದಾಯಿತ ಕ್ರಯಪತ್ರವನ್ನು ದಿಃ 11.04.2014 ರಂದು 3 ನೇ ಪ್ರತಿವಾದಿಗೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅದೇ ದಿನ ಸದರಿ ಕರಿಬಸಮ್ಮ ಚೆಳ್ಳಿ ಈಕೆಯ ಹೆಸರಿಗೆ ಬರೆದುಕೊಟ್ಟಿದ ಖರೀದಿ ಖರೀದಿಪತ್ರವನ್ನು ನೊಂದಾಯಿತು ರದ್ದತಿ ಪತ್ರದ ಮುಖಾಂತರ ರದ್ದು ಗೊಳಿಸಿದ್ದೆವೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರುಪತ್ರ, ಖರೀದಿ ಪತ್ರ ಮತ್ತು ರದ್ದತಿಪತ್ರ ನನ್ನ ಸಮಕ್ಷಮ ಆಗಿದೆ ಎಂದರೆ ಸರಿಯಲ್ಲ. ಆ ಎಲ್ಲಾ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ಗಂಡ ಬರೆದುಕೊಟ್ಟ

ನೊಂದಾಯಿತ ಪತ್ರಕ್ಕೆ ಕಡಬಗೇರಿ ಗ್ರಾಮದ ಬಿ ಮಲ್ಲಿಕಾರ್ಜುನ ಮತ್ತು ಕೆ ಎನ್ ಶಿವಕುಮಾರರವರು ಸಾಕ್ಷಿಯಾಗಿ ಸಹಿ ಮಾಡಿರುವರು ಎಂದರೆ ಸರಿಯಲ್ಲ. ಸದರಿ ಪತ್ರವನ್ನು ಪತ್ರಬರಹಗಾರಾದ ಬಸವರಾಜರವರು ತಯಾರು ಮಾಡಿರುವರು ಎಂದರೆ ಸರಿಯಲ್ಲ. ನನ್ನ ಗಂಡ ಬರೆದುಕೊಟ್ಟಿರುವ ನೊಂದಾಯಿತ ಖರೀದಿಪತ್ರವು ನನಗೆ ಬಂಧನಕಾರಿಯಾಗುವುದು ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಮತ್ತು ನನಗೆ ಮೇಲೆ ಹೇಳಿದ ಎಲ್ಲಾ ವಿಚಾರಗಳು ಗೋತ್ತಿರುತ್ತವೆ ಎಂದರೆ ಸರಿಯಲ್ಲ. 1 ನೇ ದಾವಾ ಆಸ್ತಿಯ ಮೇಲೆ ವಾದಿಗಳಾದ ನಮಗೆ ಹಾಗೂ 1 ಮತ್ತು 2 ನೇ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ವಾದಿಗಳಾದ ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಸೇರಿಕೊಂಡು ಮಿಲಾಫೆಯಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನೊಂದಾಯಿತ ಖರೀದಿಪತ್ರವಾದ ನಂತರ 3 ನೇ ಪ್ರತಿವಾದಿಯ ಹೆಸರಿಗೆ ಹಕ್ಕುಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಈಗ 1 ನೇ ದಾವಾ ಆಸ್ತಿ ಯಾರ ಹೆಸರಿನಲ್ಲಿ ಇರುವುದು ಎಂದು ನನಗೆ ಗೋತ್ತಿರುವುದಿಲ್ಲ. ನಾನು ಹಾಜರುಪಡಿಸಿದ 1 ನೇ ದಾವಾ ಆಸ್ತಿಯ ಪಹಣಿಯಲ್ಲಿ 3 ನೇ ಪ್ರತಿವಾದಿದ ಹೆಸರು ಇದೆ ಎಂದರೆ ಸರಿ. 3 ನೇ ಪ್ರತಿವಾದಿ ಖರೀದಿ ಮಾಡಿದ ದಿನದಿಂದ ಆತನೇ ಸ್ವಾದೀನದಲ್ಲಿ ಇದ್ದೆನೆ ಎಂದರೆ ಸರಿ. ನಾನು 3 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಹಕ್ಕು ಬದಲಾವಣೆಯನ್ನು ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಗೋತ್ತಿರುವುದಿಲ್ಲ. ನನ್ನ ಗಂಡ 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಖರೀದಿಪತ್ರವನ್ನು ರದ್ದು ಪಡಿಸುವೆಂತೆ ದಾವೆ ಹಾಕಿರುವುದಿಲ್ಲ ಎಂದರೆ ನಾನು ಎ.ಸಿ ನ್ಯಾಯಾಲಯದಲ್ಲಿ ಹಾಕಿರುತ್ತೇನೆ. ಎ.ಸಿ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ ನನಗೆ ಗೋತ್ತಿರುವುದಿಲ್ಲ. ಎ.ಸಿ ನ್ಯಾಯಾಲಯಕ್ಕೆ ಸಂಬಂದಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿ ಜಂಟಿ ಕುಟುಂಬ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮಾರಾಟ ಮಾಡಿದ ವಿಚಾರ ನನಗೆ ಗೋತ್ತಿತ್ತು ಎಂದರೆ ಸರಿಯಲ್ಲ, ಗೋತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಯಾರು ಯಾರ ಬಳಿ ಎಷ್ಟೆಷ್ಟು ಸಾಲ ಮಾಡಿದದರು ಎಂದು ನಾನು ವಾದ ಪತ್ರದಲ್ಲಿ ಬರೆದಿರುವುದಿಲ್ಲ. ಯಾರು ಯಾರಿಗೆ ಎಷ್ಟೆಷ್ಟು ಹಣವನ್ನು ಕೊಟ್ಟು ಸಾಲವನ್ನು ತೀರಿಸಿದ್ದೇನೆ ಎಂದು ವಾದಪತ್ರದಲ್ಲಿ ಹೇಳಿರುವುದಿಲ್ಲ. ನನ್ನ ಗಂಡನಿಗ ಸಾಲ ಕೊಡಬಾರುದು ಎಂದು ನಾನು ಟಾಂ ಟಾಂ (ಪ್ರಚಾರ) ಹೊಡೆಸಿರುವುದಿಲ್ಲ. ನನ್ನ ಗಂಡ ಕುಡಿಯುತ್ತಿದ್ದರು ಮತ್ತು ಇಸ್ಪಿಟ್ ಜುಜಾಟ ಆಡುತ್ತಿದ್ದರು ಎಂದು ದಾವೆಗೆ ಅನುಕೂಲವಾಗುಂತೆ ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ದುಶ್ಚಟಕ್ಕೆ ಅವರ ತಾಯಿ ಬೆಂಬಲಕೊಡುತ್ತಿದ್ದರು ಎಂದು ನಾನು ಹೇಳಿರುವುದಿಲ್ಲ. ನನ್ನ ಗಂಡ ನಾಮ ಮಾತ್ರವಾಗಿ 3 ನೇ ಪ್ರತಿವಾದಿಗೆ ಖರೀದಿಪತ್ರವನ್ನು ಬರೆದುಕೊಟ್ಟಿದರು ಎಂದು ಸುಳ್ಳು ಹೇಳುತ್ತಿದೇನ ಎಂದರೆ ಸರಿಯಲ್ಲ. ನನ್ನ ಗಂಡ ಕುಡಿತದ ಚಟಕ್ಕೆ ಬಿದ್ದು ಆಸ್ತಿ ಮಾರಿರುವನು ಎಂದು ಸುಳ್ಳು

O.S. 244/2016

P.W.1

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎ.ಸಿ ನ್ಯಾಯಾಲಯದಲ್ಲಿ ಯಾವುದೇ ಕೇಸು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಕಾನೂನು ಬದ್ದವಾಗಿ 1 ನೇ ದಾವಾ ಆಸ್ತಿ ಖರೀದಿ ಮಾಡಿರುವನು ಎಂದರೆ ಸರಿಯಲ್ಲ. ಸುಳ್ಳು ದಾವೆ ಹಾಗೂ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )

**ಓ ಹೇ ಕೇ ಸರಿಯಿದೆ.**

13-02-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**